


# ಹೊಸ ಶಿಕ್ಷಣ ನೀತಿ : ಭಾಷೆ - ಸಾಹಿತ್ಯ- ಸವಾಲುಗಳು

- ಡಾ. ಎಚ್. ಬಿ. ಕೋಲ್ಕಾರ



# ಹೊಸ ಶಿಕ್ಷಣ ನೀತಿ :
# ಭಾಷೆ-ಸಾಹಿತ್ಯ-ಸವಾಲುಗಳು

(ರಾಷ್ಟ್ರೀಯ ವಿಚಾರ ಸಂಕಿರಣದ ಲೇಖನಗಳು)

ಸಂಪಾದಕರು

ಡಾ. ಎಚ್.ಬಿ. ಕೋಲ್ಕಾರ

ಪ್ರಕಾಶಕರು

ಶುಭಂ ಪಬ್ಲಿಕೇಶನ್
ಕಾನಪೂರ-208021 (ಉತ್ತರ ಪ್ರದೇಶ)
ಪ್ರಾಚಾರ್ಯರು
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಬೆಳಗಾವಿ.

2022

**HOSA SHIKSHANA NEETI: BHASHE-SAHITYA-SAVALUGALU** (RASTHRIYA VICHARA SAMKIRANADA LEKHANAGALU)

Editors : **Dr. H.B. Kolkar,** Associate Professor, Rani Parvati Devi Arts and Commerce College, Belagavi. Mobile: 9481562481.Published by: **Shubham Publication,** 3 A/128, Hanspuram Naubasta, KANAPUR NAGAR PIN : 208021 (U.P.) EMail: shubhampublicationskanpur@gmail.com. Contact: 9452971407, 9792402100. and **Dr. Shoba Naik,** Principal, Rani Parvati Devi Arts and Commerce College, Belagavi. ©: Reserved, First Impression: April, 2022, Pages: X+89=99, Price: 100/- Paper Used: 70 gsm, Copies: 500, Layout: Dr. Savakar S. Kamble.

**ISBN: 978-93-92417-22-1**

**ಹೊಸ ಶಿಕ್ಷಣ ನೀತಿ : ಭಾಷೆ–ಸಾಹಿತ್ಯ–ಸವಾಲುಗಳು**

**ಸಂಪಾದಕರು:** **ಡಾ. ಎಚ್. ಬಿ. ಕೋಲ್ಕಾರ**
ಸಹ ಪ್ರಾಧ್ಯಾಪಕರು
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಬೆಳಗಾವಿ.

**ಪ್ರಕಾಶಕರು:** **ಶುಭಂ ಪಬ್ಲಿಕೇಶನ್**
೩ಎ/೧೨೮, ಹಂಸಪುರಂ ನೌಬಸ್ತಾ, ಕಾನಪುರ ನಗರ–
೨೦೮೦೨೧ (ಉತ್ತರ ಪ್ರದೇಶ)
**ಡಾ. ಶೋಭಾ ನಾಯಿಕ**
ಪ್ರಾಚಾರ್ಯರು
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಬೆಳಗಾವಿ.

©: ಕಾಯ್ದಿರಿಸಿದೆ

ಪ್ರಥಮ ಮುದ್ರಣ: ಎಪ್ರಿಲ್, ೨೦೨೨

ಪ್ರತಿಗಳು: ೫೦೦

ಪುಟಗಳು: X+೮೯=೯೯

ಬೆಲೆ: ೧೦೦/–

ಪುಟ ವಿನ್ಯಾಸ: **ಡಾ. ಸಾವುಕಾರ ಎಸ್. ಕಾಂಬಳೆ**

# ಸಂಪಾದಕೀಯ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ – ೨೦೨೦ ನ್ನು ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ೨೦೨೧-೨೨ ನೇಯ ಸಾಲಿನಿಂದ ಜಾರಿಗೆ ತಂದು ಅನುಷ್ಠಾನಗೊಳಿಸಲಾಗುತ್ತಿದೆ. ಈ ಹೊಸ ಶಿಕ್ಷಣ ನೀತಿಯು ವಿದ್ಯಾರ್ಥಿಗಳಿಗೆ ಮಾನವಿಕ ವ್ಯಾವಹಾರಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ವೈಜ್ಞಾನಿಕ, ವೈಚಾರಿಕ ಆಡಳಿತಾತ್ಮಕ ಹೀಗೆ ತಮ್ಮ ಆಸಕ್ತಿಗೆ ತಕ್ಕಂತೆ ವಿಷಯಗಳನ್ನು ಆಯ್ಕೆಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ಮತ್ತು ಮಾತೃಭಾಷೆಯಿಂದ ಹಿಡಿದು ಪ್ರಾದೇಶಿಕ, ದೇಶಿಕ. ಜಾಗತಿಕ ಮಟ್ಟದ ಭಾಷೆ, ಸಾಹಿತ್ಯ, ಸಂಸ್ಕೃತಿಯ ಅಧ್ಯಯನದ ಶಿಸ್ತುಗಳನ್ನು ಆಯ್ಕೆ ಮಾಡಿಕೊಂಡು ಅಭ್ಯಸಿಸುವ ಅವಕಾಶವನ್ನು ಒದಗಿಸಿದೆ. ಅಲ್ಲದೆ ಉದ್ಯೋಗ, ವ್ಯವಸಾಯ, ಕ್ರೀಡೆ. ಯೋಗ, ಗ್ರಾಮ ಮೂಲದ ಸ್ವಾವಲಂಬೀ ಕೈಗಾರಿಕೆಗಳು ಮೊದಲಾದವುಗಳಿಗೆ ಅಗತ್ಯವಾಗಿ ಬೇಕಾಗುವ ಕೌಶಲ್ಯಗಳ್ನು ಕಲಿಸುವ ಮತ್ತು ಅವುಗಳ ಮೂಲಕ ವಿದ್ಯಾರ್ಥಿಗಳನ್ನು ಸಬಲಗೊಳಿಸುವ, ಸಶಕ್ತಗೊಳಿಸುವ ಉದ್ದೇಶವನ್ನೂ ಹೊಂದಿದೆ. ಹೀಗಾಗಿ ಈ ಹೊಸ ನೀತಿಯನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಬೆಳಗಾವಿ ನಗರದ ಪ್ರತಿಷ್ಠಿತ ಸೌಥ್ ಕೊಂಕಣ ಶಿಕ್ಷಣ ಸಂಸ್ಥೆಯ ರಾಣಿ ಪಾರ್ವತಿ ದೇವಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯವು ಇತ್ತೀಚೆಗೆ ಎಪ್ರಿಲ್ ೨೩, ೨೦೨೨ ರಂದು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿತ್ತು.

ಈ ಶಿಕ್ಷಣ ನೀತಿಯ ಕುರಿತು ಪ್ರಾಧ್ಯಾಪಕರಿಗೆ ಮಾರ್ಗದರ್ಶನ ಮಾಡುವುದು. ದಿಗ್ದರ್ಶನ ನೀಡುವುದು ಇದರ ಮುಖ್ಯ ಉದ್ದೇಶವಾಗಿತ್ತು. ಈ ವಿಚಾರ ಸಂಕಿರಣಕ್ಕೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ರಾಮಚಂದ್ರ ಗೌಡ ಅವರು. ಬೆಂಗಳೂರಿನ ಯು.ಜಿ.ಸಿ. ಶಿಕ್ಷಣಾಧಿಕಾರಿ ಡಾ. ಲತಾ ಕೆ. ಸಿ. ಅವರು. ಬೆಳಗಾವಿ ಜಿಲ್ಲಾ ಸರಕಾರಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಮುಖ್ಯ

ಅಧಿಕಾರಿಗಳಾದ ಶ್ರೀ. ರವೀಂದ್ರ ಮದೀಹಳ್ಳಿ ಅವರು ಮತ್ತು ಮುಂಬೈನ ಹಿರಿಯ ಅನುವಾದಕಿ ಶ್ರೀಮತಿ ರೇಖಾ ದೇಶಪಾಂಡೆ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಸ್ವರೂಪ ಮತ್ತು ಅದರ ವೈಶಿಷ್ಟ್ಯದ ಕುರಿತು ಪ್ರೊ. ರಾಮಚಂದ್ರ ಗೌಡ ಅವರು, ಪ್ರಾಧ್ಯಾಪಕರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಡಾ. ಲತಾ ಕೆ.ಸಿ. ಅವರು ವಿಶೇಷ ವಿಚಾರಗಳನ್ನು ಮಂಡಿಸಿದರು. ರವೀಂದ್ರ ಮದೀಹಳ್ಳಿ ಅವರು ಪದವಿ ಶಿಕ್ಷಣವನ್ನು 'ಉದ್ಯಮ ಮತ್ತು ವ್ಯಾಪಾರ'ದೊಂದಿಗೆ ಹೇಗೆ ಸಂಯೋಜಿಸಬೇಕು ಎಂಬುದರ ಕುರಿತು ವಿವರಣೆ ನೀಡಿದರು. ರೇಖಾ ದೇಶಪಾಂಡೆ ಅವರು ಭಾಷಾ ಮತ್ತು ಇತರ ಪ್ರಾಯೋಗಿಕ ಕೌಶಲ್ಯಗಳ ಬೆಳವಣಿಗೆಗೆ ಯಾವ ಮಾರ್ಗಗಳನ್ನು ಅನುಸರಿಸಬೇಕು ಎಂಬುದನ್ನು ತಾರ್ಕಿಕವಾಗಿ ಸೂಚಿಸಿದರು. ನಾಡಿನ ಬೇರೆ ಬೇರೆ ಭಾಗಗಳಿಂದ ಆಗಮಿಸಿದ ಕೆಲವು ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಇಂಗ್ಲಿಷ್, ಮರಾಠಿ, ಹಿಂದೀ ಮತ್ತು ಕನ್ನಡ ಭಾಷೆಗಳಲ್ಲಿ ವಿಷಯಾಧಾರಿತವಾದ ತಮ್ಮ ಪ್ರಬಂಧಗಳನ್ನು ಮಂಡಿಸಿ ವಿಚಾರ ಸಂಕಿರಣ ಯಶಸ್ವಿಗೊಳ್ಳಲು ಕಾರಣರಾದರು.

ಈ ಸಂಕಿರಣವನ್ನು ನಡೆಸಲು ಎಸ್.ಕೆ.ಇ ಸಂಸ್ಥೆಯ ಚೆರ್ಮನ್ನರಾದ ಸನ್ಮಾನ್ಯ ಶ್ರೀ ಕಿರಣ್ ಠಾಕೂರ್ ಅವರು ಬೆಂಬಲವಾಗಿ ನಿಂತು ಪ್ರೋತ್ಸಾಹವನ್ನು ನೀಡಿದರು. ಹಾಗೂ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ಶರದ್ ವಾಲಾವಲ್ಕರ್, ಸದಸ್ಯೆ ಶ್ರೀಮತಿ ಮಾಧುರಿ ಶಾನಭಾಗ್, ಶ್ರೀಮತಿ ಬಿಂಬಾ ನಾಡಕರ್ಣಿ ಮೊದಲಾದವರು ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಿದರು. ಈ ಎಲ್ಲ ಗೌರವಾನ್ವಿತ ಗಣ್ಯರಿಗೆ ಕೃತಜ್ಞತೆಯನ್ನು ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯವೆಂದು ಭಾವಿಸುತ್ತೇವೆ.

ಈ ವಿಚಾರ ಸಂಕಿರಣದ ಎಲ್ಲ ಸಂಪನ್ಮೂಲ ಮಹನೀಯರಿಗೂ ಅಲ್ಪಾವಧಿಯಲ್ಲಿ ಪ್ರಬಂಧಗಳನ್ನು ಕಳುಹಿಸಿ ಮತ್ತು ಸಂಕಿರಣದಲ್ಲಿ ಪಾಲ್ಗೊಂಡು ತಮ್ಮ ವಿಚಾರಗಳನ್ನು ಮಂಡಿಸಿದ ಮತ್ತು ಈ ಹೊತ್ತಿಗೆಯ ರೂಪದಲ್ಲಿ ಅವುಗಳು ಪ್ರಕಟಗೊಳ್ಳಲು ಸಹಕರಿಸಿದ ಅಧ್ಯಾಪಕರಿಗೂ ಸಂಶೋಧನಾ ವಿದ್ಯಾರ್ಥಿಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಸಂಕಿರಣವು ಯಶಸ್ವಿಗೊಳ್ಳಲು ಕಾರಣರಾದ ನಮ್ಮ ಎಲ್ಲ ಸಹೋದ್ಯೋಗಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಈ ಸಾಂದರ್ಭಿಕ ಹೊತ್ತಿಗೆಯಲ್ಲಿನ ಪ್ರಬಂಧಗಳು ೨೦೨೦ ರ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಸ್ತುತ ಪಡಿಸಿದ ಮಹತ್ವದ ಅಂಶಗಳನ್ನು, ಅದರ ಸಾಧಕ–ಬಾಧಕಗಳನ್ನು ಅಥವಾ ಗತಿಮಿತಿಗಳನ್ನು, ಎದುರಾಗಬಹುದಾದ

ಸಮಸ್ಯೆಗಳನ್ನು ಮತ್ತು ಭಾಷೆ ಸಾಹಿತ್ಯ ಹಾಗೂ ಅನ್ಯಜ್ಞಾನ ಶಿಸ್ತುಗಳ ಕುರಿತೂ ತಿಳಿಯಲು ಓದುಗರಿಗೆ ಸಹಾಯ ಮಾಡುತ್ತದೆ ಎಂಬ ನಂಬುಗೆ ನಮ್ಮದು. ಪ್ರಕಾಶಕರಾದ ಕಾನ್ಪುರದ ಶುಭಂ ಪಬ್ಲಿಕೇಶನ್ ಹಾಗೂ ರಾಣಿ ಪಾರ್ವತಿದೇವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಶ್ರೀಮತಿ ಶೋಭಾ ನಾಯಿಕ ಅವರಿಗೂ, ಡಿಟಿಪಿ ಕಾರ್ಯದೊಂದಿಗೆ ಇದಕ್ಕೆ ವಿನ್ಯಾಸ ನೀಡಿದ ಡಾ. ಸಾವುಕಾರ ಎಸ್. ಕಾಂಬಳೆ ಅವರಿಗೂ, ಹೃತ್ಪೂರ್ವಕ ಧನ್ಯವಾದಗಳು.

**– ಡಾ. ಎಚ್. ಬಿ. ಕೋಲ್ಕಾರ**

**ಮುಖ್ಯಸ್ಥರು, ಕನ್ನಡ ವಿಭಾಗ**

■■

*

# ಪರಿವಿಡಿ


೧. ನಾಲ್ಕು ವರ್ಷಗಳ ಬಿ.ಇಡಿ(ಎನ್.ಇ.ಪಿ) ಪದವಿ ಶಿಕ್ಷಣದ ಸಾಧ್ಯತೆ ಮತ್ತು ಸವಾಲುಗಳು

- ಡಾ. ಹೊಂಬಯ್ಯ ಹೊನ್ನಲಗೆರೆ / ೧

೨. ಕನ್ನಡ ಭಾಷೆ ಎದುರಿಸುತ್ತಿರುವ ಸವಾಲುಗಳು

- ಡಾ. ಸಾವುಕಾರ ಎಸ್. ಕಾಂಬಳೆ / ೮

೩. ಪಾರಂಪರಿಕ ಜ್ಞಾನ ಶಿಸ್ತುಗಳೊಂದಿಗೆ ಹೊಸ ಅಧ್ಯಯನ ವಿಧಾನ ಮತ್ತು ಪಠ್ಯಕ್ರಮ

- ಅಮೃತಾ ಈರಣ್ಣಾ ಉಗಾರೆ / ೧೨

೪. ಕನ್ನಡ ಮೌಖಿಕ ಪರಂಪರೆಯ ತತ್ವಪದ ಸಾಹಿತ್ಯ

- ಡಾ. ಪ್ರಕಾಶ ಗ. ಖಾಡೆ / ೧೫

೫. ಮಿರ್ಜಿ ಅಣ್ಣಾರಾಯರ ಅನುವಾದದ ವಿಧಾನ ಮತ್ತು ವಿಶೇಷತೆ

- ಡಾ. ಎಚ್.ಬಿ. ಕೋಲ್ಕಾರ / ೨೧

೬. ವರ್ಚುವಲ್ ಮಾಧ್ಯಮದ ಗುಣಗಳು ಮತ್ತು ಅವಗುಣಗಳು

- ಪ್ರೊ. ಆಯ್ ಪಿ. ಹೋಳಕರ / ೨೭

೭ ಕನ್ನಡ ಕಾವ್ಯದ ಕಣ್ಣಲ್ಲಿ ಡಾ. ಸಿದ್ಧಲಿಂಗಯ್ಯ

- ಡಾ. ಸದಾಶಿವ ದೊಡಮನಿ / ೩೨

೮. ಶಾಸನಗಳಲ್ಲಿ ಜೀವನ ಮೌಲ್ಯಗಳು

- ಡಾ. ಆನಂದಕುಮಾರ ಎಂ. ಜಕ್ಕಣ್ಣನವರ / ೩೮

೯. ವಚನ ಸಾಹಿತ್ಯ ಮತ್ತು ದಾಂಪತ್ಯ ಜೀವನ

- ಡಾ. ಪ್ರಕಾಶ ಎನ್ ನರಗುಂದ / ೫೯

೧೦. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅಗತ್ಯತೆ ಮತ್ತು ಪ್ರಸ್ತುತತೆ-ಒಂದು ಅವಲೋಕನ

- ಡಾ. ಸುನಂದಾ ಎಂ. ಕಾಳಾಯಿ / ೬೭

೧೧. ಮೊಗಸಾಲೆಯವರ ಕಾವ್ಯದಲ್ಲಿ ಸ್ತ್ರೀಪರ ಕಾಳಜಿ

- ಪ್ರೊ. ಎಚ್.ಬಿ. ಕೋಲ್ಕಾರ / ೭೫

೧೨.ಉನ್ನತ ಶಿಕ್ಷಣದಲ್ಲಿ ಭಾರತೀಯ ಭಾಷೆಗಳ ಸ್ಥಿತಿಗತಿ

- ಶ್ವೇತಾ ಕ. ಹಂದಿಗೋಳ / ೮೪

# ೧೧. ಮೊಗಸಾಲೆಯವರ ಕಾವ್ಯದಲ್ಲಿ ಸ್ತ್ರೀಪರ ಕಾಳಜಿ

❖

**ಪ್ರೊ. ಎಚ್.ಬಿ. ಕೋಲ್ಕಾರ**

ಸಮಾಜ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಮುಖಾಮುಖಿಗೊಳಿಸಿಕೊಂಡು ಅವುಗಳ ಪುನರ್ ಪರಿಶೀಲನೆಗೆ ತೊಡಗುವುದರ ಮೂಲಕ ಭಾರತದಲ್ಲಿ ಸ್ತ್ರೀವಾದಿ ಚಿಂತನೆಯು (ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಯನ್ನೂ ಮೈಗೂಡಿಸಿಕೊಂಡು) ಇತ್ತೀಚಿನ ದಿನಗಳಲ್ಲಿ ಒಂದು ತಾತ್ವಿಕ ನೆಲೆಗಟ್ಟನ್ನು ರೂಪಿಸಿಕೊಳ್ಳುತ್ತಿದೆ. ಇಂಥ ಸಂದರ್ಭದಲ್ಲಿ ತಲೆ ತಲಾಂತರದಿಂದ ಅನೇಕ ವಾದ ವಿವಾದಗಳಿಗೆ ಶೋಷಣೆಗೆ ದೂಷಣೆಗೆ ಒಳಗಾದ ಮಹಿಳೆಯ ಆಸೆ ಆಕಾಂಕ್ಷೆ, ಸ್ಥಾನ-ಮಾನ, ಘನತೆ - ಗೌರವಗಳನ್ನು ಮುಕ್ತ ಮನಸ್ಸಿನಿಂದ ನಿಷ್ಕರ್ಷಿಸುವ ಸಾಧ್ಯತೆಗಳು ದೇಶಾದ್ಯಂತ ಒದಗುತ್ತಿವೆ. ಈ ಸಾಧ್ಯತೆಗಳಿಗನುಗುಣವಾಗಿ ಮಹಿಳೆಯು ಸಕಾಲಿಕ ಅನುವು, ಅವಕಾಶಗಳನ್ನು ಮಾಡಿಕೊಂಡು ತನ್ನ ಅಸ್ತಿತ್ವದ ನೆಲೆಗಳನ್ನು ತಾನು ನಡೆದು ಬಂದ ದಾರಿಯೊಳಗೆ ಮನಃ ಪರಿಶೋಧಿಸಿಕೊಳ್ಳುವುದರ ಮೂಲಕ, ತನ್ನತನ (Identity) ವನ್ನು ಗುರುತಿಸಿಕೊಂಡು ಮುನ್ನಡೆವ ಛಲ-ಬಲಗಳನ್ನು ಈ ಸ್ತ್ರೀವಾದಿ ಚಿಂತನೆಯೊಳಗೆ ತುಂಬಿಕೊಳ್ಳುತ್ತಿರುವ ಒತ್ತಡದ ಸಂದರ್ಭದಲ್ಲಿ ಮತ್ತು ಮೊಗಸಾಲೆಯವರಿಗೆ ಅರುವತ್ತರ ಕಸುವು ತುಂಬಿದ ಖುಷಿಯಲ್ಲಿ ಅವರ ಕಾವ್ಯದಲ್ಲಿನ ಸ್ತ್ರೀಪರ ಕಾಳಜಿಯನ್ನು ಕುರಿತು ನಾಲ್ಕು ಮಾತುಗಳನ್ನು ಲೇಖನ ರೂಪದಲ್ಲಿ ನಿಮ್ಮ ಮುಂದಿಡಲು ನನಗೆ ತುಂಬ ಸಂತೋಷವೆನ್ನಿಸುತ್ತದೆ.

ಡಾ. ನಾ. ಮೊಗಸಾಲೆಯವರು ಕನ್ನಡದಲ್ಲಿ ತುಂಬ ಎಚ್ಚರದಿಂದ ಕಾವ್ಯ ಬರೆದವರು. ತಮ್ಮ ಮೊದಲ ಕವನ ಸಂಕಲನಕ್ಕೆ "ವರ್ತಮಾನದ ಮುಖಗಳು' (೧೯೭೪) ಎಂದು ಹೆಸರಿಟ್ಟುದೇ ಇದಕ್ಕೆ ಸಾಕ್ಷಿ.

"ಬರೆಯುವುದೆಂದರೆ ಅಂಜಿಕೆ
ಬರೆಯದಿದ್ದರೆ ಕಾದ ಮಣ್ಣಿನಲ್ಲಿ ಬಿದ್ದ ಬೀಜದ ವೇದನೆ...."

ಇಂತಹ ಎಚ್ಚರ ಮತ್ತು ತಳಮಳಗಳೊಂದಿಗೆ ಕಾವ್ಯ ಬರೆವ ಅವರು -

"....ನಾನು ಯಾರ ಹಾಗೂ ಆಗದ
ಅನ್ವೇಷಣಾ ವಾಕ್ಯ....."

ಎಂದು ತಮ್ಮದೇ ದಾರಿಯನ್ನು ಕಾವ್ಯದ ಭಾಷೆ ಮತ್ತು ಬರವಣಿಗೆಯಲ್ಲಿ ಕಂಡುಕೊಳ್ಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಆಡುಮಾತಿನ ಲಯಗಳನ್ನೊಳಗೊಂಡ ಭಾಷೆಯ ಸೊಗಡಿನೊಳಗೆ ಅವರು ಮೂಡಿಸುವ ಶಬ್ದ ಚಮತ್ಕಾರಗಳು, ಅರ್ಥದ ಹೊಸ ಹೊಸ ಹೊಳಹುಗಳು, ಬದುಕಿನ ಒಳ ಹೊರಗುಗಳನ್ನೊಳಗೊಂಡ ವಿಷಯ ನಿರೂಪಣಾ ರೀತಿ, ಕಥನ ತಂತ್ರ, ಸಂವಾದ ರೂಪದ ಚಿಂತನ ಮಂಥನಗಳು ಕಾವ್ಯದುದ್ದಕ್ಕೂ ತುಂಬಿ ನಿಂತಿವೆ.

ಮೊಗಸಾಲೆಯರ ಕಾವ್ಯದಲ್ಲಿ ಸ್ತ್ರೀಪರ ಕಾಳಜಿಯು ಬಹುಸೂಕ್ಷ್ಮವಾಗಿ ಅಷ್ಟೇ ಗಂಭೀರ ಚಿಂತನೆಯಾಗಿ ಅಭಿವ್ಯಕ್ತಗೊಂಡಿದೆ. ವಾಸ್ತವವನ್ನು ಮುಲಾಜಿಲ್ಲದೆ ತೆರೆದಿಡುವ ಅವರ ಕಾವ್ಯ ಪರಂಪರೆಯಿಂದ ಪ್ರಸ್ತುತದವರೆಗಿನ ಸ್ತ್ರೀ ಶೋಷಣೆಯ ವಿಭಿನ್ನ ಮುಖಗಳನ್ನು, ಅವಳ ಸ್ಥಿತಿ-ಗತಿಯ ಯಥಾವತ್ತಾದ ಚಿತ್ರಣಗಳನ್ನು ದಟ್ಟವಾಗಿ ತೆರೆದಿಡುತ್ತದೆ.

"...... ಮಣ್ಣಿನ ಮಕ್ಕಳಿಗೆ ಮಣ್ಣಿನ ವಾಸನೆ
ಉಪ್ಪಿನ ರುಚಿ ಕಡಲ ಮತ್ಸ್ಯಗಂಧಿ ಗಾಳಿಯ ಪರಿಚಯವಿಲ್ಲ
ದಿರುತ್ತದೆಯೇ? ಹಾಗೇ ನನಗೂ ಹೆಣ್ಣಿನ ಸಂಗ
ತಿಗಳು ಗೊತ್ತು. ನಾನು ಈ ದೇಶದ ಸಭ್ಯನಾಗರಿಕನೇ....."
- (ನಿರಾಕರಣೆ)

ಎಂಬ ಮೂಲಭೂತ ಪ್ರಶ್ನೆಯನ್ನಿಟ್ಟುಕೊಂಡೇ ಹೊರಡುವ ಮೊಗಸಾಲೆಯವರು ಸ್ತ್ರೀಪರವಾಗಿ ಭಾರತೀಯ ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವ ರೀತಿಯಲ್ಲಿ ದೃಷ್ಟಿ ಬೀರುತ್ತಾರೆ. ಈ ನಿಶ್ಚಳ ದೃಷ್ಟಿಯಲ್ಲಿ ಅವರಿಗೆ ಬ್ರಾಹ್ಮಣ ಸಂಸ್ಕೃತಿ ಹಾಗೂ ಅದಕ್ಕೆ ಪೂರಕವಾದ ಪುರುಷ ರಾಜಕಾರಣದ ಭಯಂಕರ ಸುಳಿಗಳು, ಕಂದಕಗಳು ಕಾಣುತ್ತವೆ. ಇವುಗಳೊಳಗೆ ಸಿಕ್ಕು ನಲುಗುವ, ನರಳುವ ಹೆಣ್ಣಿನ ಹೀನಾಯ ಸ್ಥಿತಿಗತಿಗಳನ್ನು ಕಂಡು ಮರುಗುತ್ತಾರೆ, ಕೊರಗುತ್ತಾರೆ ರೋಸಿ ಉಮ್ಮಳಿಸಿ -

"ಬೊಜ್ಜು ಬೆಳೆದ ಈ ಬ್ರಾಹ್ಮಣ
ಸಂಸ್ಕೃತಿ

ಮುಷ್ಟಿಮೈಥುನದಲ್ಲಿ ಸಿಕ್ಕಿ ಬಂಜೆ
ಯಾದಂತೆ ನೀವು ಬದುಕುವ ಹಾಗೆ ಬದುಕದೆ
ಬಂದಳಿಕೆ ಬದುಕಿ ಈ ದೇ
ಶವ ಸಕೇಶಿಯಾಗಿ ಮಾಡುತ್ತೀರೋ ಎಂಬ ಭಯ, ಸಂ
ದೇಹ ಜೀವಂತ ನನ್ನದು....."

ಎಂದು ಖಾರವಾಗಿ ಉಗಿದು

"ನೀವು ಈ ರಾಜಕೀಯದಿಂದ ನಿವೃತ್ತರಾಗಿ
ಇವಳನ್ನು ಇವಳಷ್ಟಕ್ಕೆ ಬಿಟ್ಟು ಬಿಟ್ಟರೆ...."

– (ನಿರಾಕರಣೆ)

ಮೊಗಸಾಲೆಯವರು ಸ್ತ್ರೀಯನ್ನು ಕಾಣುವ ರೀತಿ ವ್ಯಾಖ್ಯಾನಿಸುವ ರೀತಿಯೇ ವಿಶಿಷ್ಟ.

"ನೀರೊಳಗಿದ್ದೂ ನೀರು ನಿಲ್ಲದ ಕಮಲದೆಲೆಯ ಪ್ರಕೃತಿ ನಿನ್ನದು"

"ಮನುಷ್ಯ ಪ್ರೀತಿಗೆ ಮುಖವಾದವಳು...."
"......... ನೀನು ಹೆಚ್ಚೆಚ್ಚು ಗೊತ್ತಾದ ಹಾಗೆ
ನಿನಗೂ ಬದುಕಿಗೂ ದೂರವಾಗಬೇಕಿದ್ದ ನಾನು
ತೆಪ್ಪಗೆ ಬದುಕನ್ನೂ ನಿನ್ನನ್ನೂ ಒಪ್ಪಿಕೊಂಡಿದ್ದೇನೆ..."

– (ಶ್ಯಾಮಲಾ)

ಎನ್ನುವಲ್ಲಿ ಹೆಣ್ಣು ಗಂಡಿನ ಭೇದವಳಿದ ಸಮರಸ ಬದುಕಿನ ತದಾತ್ಮದ ಕನಸನ್ನು ಕನವರಿಸುವ ರೀತಿ ತುಂಬ ಸುಂದರವಾಗುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ 'ಮದುವೆ' ಎಂಬುದೇ ಶೋಷಣೆಯ ಮೂಲ ಮತ್ತು ಮುಖ್ಯ ಕೇಂದ್ರವೆನ್ನುವುದನ್ನು ಸ್ತ್ರೀವಾದಿ ಚಿಂತನೆಯು ಈಗಾಗಲೇ ಗುರುತಿಸಿಯಾಗಿದೆ. ಅದು ಮೊಗಸಾಲೆಯವರ ವಿಡಂಬನೆಯ ಮೊನಚಿಗೂ ಸಿಕ್ಕಿದೆ –

"ಇದೆಲ್ಲ ನಮ್ಮನ್ನು ಹಿಡಿದು ಹಾಕಿರುವ ಯೌವ್ವನದ ಹುಲಿ
ಬೋನಿನೊಳಗಿನ ನಾಟಕ...."

– (ಶ್ಯಾಮಲಾ)

ಎನ್ನುವ ಕವಿ ಕುಟುಂಬ ಬದುಕಿನಲ್ಲಿಯೇ ಹೆಣ್ಣನ್ನು ಅಪರಿಚಿತಳನ್ನಾಗಿ, ಅಪವಿತ್ರಳನ್ನಾಗಿ, ಹೀನಳನ್ನಾಗಿ, ಕುಲೀನಳನ್ನಾಗಿ ಕಾಣುವ ಪುರುಷಪ್ರಜ್ಞೆಗೆ –

"ಬಾ 'ಬಯಲಿಗೆ' ನೋಡು ನೀನು ಯಾರು
ನಿನಗೆ ನಾನು ಯಾರು
ಒಬ್ಬರಿಗೊಬ್ಬರು ಇಲ್ಲಿ ಅಪರಿಚಿತರಲ್ಲ...."

– (ಶ್ಯಾಮಲಾ)

ಎಂದು ಹಾಕುವ ಸವಾಲು ಇಡೀ ಪುರುಷಶಾಹಿ ವ್ಯವಸ್ಥೆಯೇ ಆತ್ಮವಿಮರ್ಶೆಗೆ ಮತ್ತೆ ಮತ್ತೆ ತನ್ನನ್ನು ಒಡ್ಡಿಕೊಳ್ಳುವ ಕೆಲಸಕ್ಕೆ ಹಚ್ಚುತ್ತದೆ.

ಇಲ್ಲಿಯ 'ಬಯಲು' ಮನುಷ್ಯ ಪ್ರಜ್ಞೆಯ ಅಥವಾ ಮಾನವೀಯ ಪ್ರಜ್ಞೆಯ ಅರಿವಿನೊಳಗೆ ಮೂಡುವ 'ಸ್ವಾತಂತ್ರ' ರೂಪ. ಇದು ಹೆಣ್ಣು ಗಂಡುಗಳಿಬ್ಬರೂ ಸಮಾನವಾದುದು. ಹಾಗಿದ್ದರೆ ಈ ಅರಿವಿನ ತಕ್ಕಡಿಯೊಳಗೆ ಹೆಣ್ಣಿನ ಸ್ಥಾನ ಮಾನಗಳನ್ನು ಸರಿಯಾಗಿ ತೂಗಬೇಕು. ಹಾಗೆ ತೂಗಿದರೇನೇ ಅವಳು ಅರ್ಥವಾದವಳು! ಇಲ್ಲದೇ ಹೋದರೆ ಪರಿಚಿತರಿದ್ದೂ ಅಪರಿಚಿತರನ್ನಾಗಿಸಿಕೊಂಡು ಬದುಕುವ ಈ ಪ್ರಜ್ಞಾ ಅವಸ್ಥೆಯೊಳಗೆ –

"ನಿನ್ನ ಸೊಂಟದ ಸುಳಿಯಲ್ಲಿ ಎದ್ದು ಬಿದ್ದಷ್ಟು ಸಲ
ಮುಳುಗಲೂ ಇಲ್ಲ ತೇಲಲೂ ಇಲ್ಲ
ಈ ಶತಮಾನದ ಅನುಭವಗಳೆಲ್ಲ ಹೀಗೆಯೇ...."

– (ಶ್ಯಾಮಲಾ)

ಎಂಬ ವ್ಯಥೆ ನಿರಂತರ ಕಾಡುತ್ತದೆ. ಇದು ಪುರುಷ ಪಾಶ್ಚಾತ್ತಾಪದ ದನಿಯಾಗಿ ತಣ್ಣಗೆ ಮೊಗಸಾಲೆಯವರ ಕಾವ್ಯದಲ್ಲಿ ಹರಿಯುತ್ತದೆ.

ಪುರುಷಾಧಿಪತ್ಯದಲ್ಲಿ ಸ್ತ್ರೀ ಶೋಷಣೆಯ ವಿಭಿನ್ನ ಮುಖಗಳನ್ನು ಚಿತ್ರಚಿತ್ರವಾಗಿ ಬಿಡಿಸುವ ಪರಿ ಮೊಗಸಾಲೆಯವರ ಕಾವ್ಯದಲ್ಲಿ ಮತ್ತೆ ಮತ್ತೆ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ತನ್ನತನವನೆಲ್ಲ ಇಲ್ಲವಾಗಿಸಿಕೊಂಡು ಅನ್ಯತನದಲ್ಲೇ ತನ್ನ ಅಸ್ತಿತ್ವ ಕಂಡು, ಅಸಹ್ಯವನ್ನೂ ಸಹ್ಯವಾಗಿಸಿಕೊಂಡು ಸಂಯಮಶೀಲಳಾಗಿ ಬದುಕುವ ಹೆಣ್ಣು "ಗೂಟಕ್ಕೆ ಕಟ್ಟಿದ ಕಪಿಲೆ" ಯಂತಾಗಿರುವ ಸ್ಥಿತಿ ಮಾನವತೆಯ ಕರುಳಿರಿಯುವಂತಿದೆ.

"ಅಮ್ಮ ಎಂದಾಗ ನನಗೆ ಗೋವಿನ ಕಥೆಯ ನೆನಪು;
ತಲೆ ತಗ್ಗಿಸಿ ಗೂಟದ ವರ್ತುಲದಲ್ಲಿ ಸುತ್ತುವ ಚಿತ್ರ
...............................................................................
...............................................................................
ಅಪ್ಪನ ಖಾಸಗಿ ಮನೆಯೊಳಕ್ಕೆ ಹೆಜ್ಜೆಯ ಮೇಲೆ ಹೆಜ್ಜೆಯ ನಿಟ್ಟು
ಅಡಿಗೆ ಮನೆಯ ಹೊಗೆ ಮಲಗುವ ಕೋಣೆಯ ತಗಣೆ ನುಸಿಗಳ ಮಧ್ಯೆ

ಪರಕೀಯವಾಗಿ ಉಸಿರುಕಟ್ಟಿದರೂ ಅದೇ ಶುದ್ಧಗಾಳಿ ಎಂಬ ಭ್ರಮೆಯಲ್ಲಿ
ಮೈಜಿಡ್ಡು ಬಿದ್ದರೂ ರುಚಿಕೆಡದ ನಾಲಿಗೆಯ ಎಚ್ಚರದಲ್ಲಿ
ಸಾಧ್ಯತೆಗಳನ್ನು ಅರಳಿಸದ ಸಂಕೀರ್ಣತೆಯಲ್ಲಿ ಕೊನೆ
ತನಕ ಅವಳು ಗೂಟದಿಂದ ಹಗ್ಗ ಕಿತ್ತುಕೊಳ್ಳಲು ಯತ್ನಿಸಲಿಲ್ಲ.

.........................................................

ಅಪ್ಪ ಸತ್ತ, ಸತ್ತಂದಿನಿಂದ
ಕಾಲಸಪ್ಪಳ ಕ್ಷೀಣಿಸುತ್ತಾ ಬಂದ ಹಾಗೇ ಅಪ್ಪನ ಸಾರ್ವಭೌಮತ್ವದಿಂದ
ಈಕೆ ಪಾರಾಗಬಹುದು ಎಂಬ ಕಲ್ಪನೆ
ಭ್ರಮೆಯಾಗಿ ಹಗ್ಗಬಿಚ್ಚಿಕೊಂಡರೂ ಗೂಟಕ್ಕಂಟಿಕೊಂಡಿರುವುದೇ
ರೂಢಿಯಾಗಿ ಮುನ್ನಿನಂತೆಯೇ – ವೈಧವ್ಯದ ಮುನ್ನಿನಂತೆಯೇ....."

– (ಅಮ್ಮ: ಒಂದು ಅನುಭವ)

ಇಂಥ ಸಂವೇದನೆಗಳು ಹೆಣ್ಣಿನ ಬಗ್ಗೆ ನಮ್ಮ ಭಾವನೆಗಳನ್ನು ಒರೆಗಲ್ಲಿಗೆ ಹಚ್ಚಿ ತಿಕ್ಕುತ್ತಾ ಆಪ್ತಗೊಳಿಸುತ್ತ ಹೋಗುತ್ತವೆ ಕಾವ್ಯದಲ್ಲಿ.

"ನೀನೊಬ್ಬ ಮನುಷ್ಯ ಎಂದುಕೊಂಡಿದ್ದೆ ಆಗ
ಬದಲಾಗಿಯೇ ಹೋದೆಯಲ್ಲ!
ಮೃಗಗಳೂ ಮನುಷ್ಯರಾಗುತ್ತಾವಂತೆ, ಮನುಷ್ಯರೂ ಹೀಗೇ
ಆಗುತ್ತಾರೆನ್ನುವುದಕ್ಕೆ ಉದಾಹರಣೆಯೇ ಸಿಗೋದಿಲ್ಲ!"

– (ಅರಾಷ್ಟ್ರಗೀತೆ)

ಇಂಥ ಹತಾಸೆಯಲ್ಲೂ ಮನುಷ್ಯತ್ವದ ಕುರುಹುಗಳನ್ನು ಹುಡುಕುವ ಆಸೆ ಮೊಗಸಾಲೆಯವರಲ್ಲಿದೆ.

ತಮ್ಮೂರಿನ ಮೊಗಸಾಲೆಯ ನೆನಪುಗಳೂ ಕವಿಗೆ ನೋವಾಗಿ ಕಾಡುವ ವಿಪರ್ಯಾಸವಿದೆ

"ತುಂಡು ಸೀರೆಯ ಅರೆಬೆತ್ತಲೆ ಎದೆಯ ಶೂದ್ರ ಹೆಂಗಸರು
ಶ್ರೀಮಂತರ ಅಡಿಕೆ ತೋಟಗಳಲ್ಲಿ ಬಾಡಿದ ಬಾಳೆಗಿಡಗಳ ಹಾಗೆ
ಮರದ ದಿಮ್ಮಿಗಳಾಗಿ ಮಲಗುತ್ತಾ ಕರಗುತ್ತಾ
ಗೊಬ್ಬರವಾಗುತ್ತಿದ್ದಾರಲ್ಲಾ – ಕೊಬ್ಬಿಗೆ....."

– (ಮೊಗಸಾಲೆಯ ನೆನಪುಗಳು)

ಎನ್ನುತ್ತ ಅಲ್ಲಿರುವ ದೌರ್ಜನ್ಯ ಕ್ರೌರ್ಯ, ಅನ್ಯಾಯ, ಅತ್ಯಾಚಾರ ಮುಂತಾದ ನೀತಿ ನಡಾವಳಿಗಳನ್ನು ತಪ್ತ ಮನಸ್ಸಿನಿಂದ ಅವಲೋಕಿಸುತ್ತಾರೆ. "ಸಾಮಾಜಿಕ

ಸಂದರ್ಭದಲ್ಲಿ ಕ್ರಾಂತಿಯ ಮಾತನ್ನಾಡುವಾಗ" ಅವರೂರೇ ಅವರಿಗೆ ಸವಾಲು ಪ್ರತಿಸವಾಲು ಹಾಕುವ ವಿಪರ್ಯಾಸದ ಸ್ಥಿತಿ ಆ ನೆನಪುಗಳಲ್ಲಿ ತುಂಬಿ ನಿಲ್ಲುತ್ತದೆ. ಹಾಗೆಯೇ "ನಿತ್ಯ ಸುಮಂಗಲಿಯಾದ ಈ ಮಣ್ಣಿನ ಹೆಣ್ಣಿನ ಜೊತೆ ಮಲಗಿ ತನ್ನ ಪುರುಷತ್ವವನ್ನು ರುಜುಪಡಿಸಿಕೊಂಡು ತಾನು ಈ ಬಸಿರಿನಿಂದ ಬಂದವನೇ ಅಲ್ಲದ ಹಾಗೆ ವರ್ತಿಸುವ ಹೀನ ಮಾನವನ ನಡೆಗೆ ಹೇಸಿಗೆ ಪಡುತ್ತಾರೆ.

ದಾಂಪತ್ಯ ಬದುಕಿನಲ್ಲಿ ಸಮರಸ ಕಾಣದ ಬದುಕಿನ ತಲ್ಲಣ ತಳಮಳಗಳನ್ನು ಸ್ವಾನುಭವದ ನೆಲೆಯಲ್ಲಿ ತೋಡಿಕೊಳ್ಳುವ ಮೊಗಸಾಲೆಯವರು –

"ಧಿಕ್ಕರಿಸಿ ಧೀರೋದಾತ್ತ ರಾಜಕುಮಾರರ ದಂಡ
ಅದೆಲ್ಲಕ್ಕಿಂತ ನನ್ನ ಒಳಗಣ್ಣ ಹೊಳಪೇ ಶ್ರೇಷ್ಠ
ವೆನ್ನುತ್ತ ಕನಸು ಕಟ್ಟಿದವಳಲ್ಲ ಈಕೆ, ಈಕೆಯ ಸುತ್ತ'
ನಾನೂ ಕಟ್ಟಿದೆನಲ್ಲ ಕೋಟೆ?"

– ( ಪ್ರೇಮ ಗೀತ)

ಎನ್ನುವ ವಿಡಂಬನೆಯ ವೈಚಾರಿಕ ಒಳಗಣ್ಣಿನಲ್ಲಿ – ಸ್ತ್ರೀಗೆ ಸಂಬಂಧಿಸಿ ಇಡೀ ಪುರುಷಶಾಹೀ ವ್ಯವಸ್ಥೆಯು ಪರಂಪರೆಯಾಗಿ ಕಟ್ಟಿದ ಬಂಧನದ ಕೋಟೆಯನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸುತ್ತಾರೆ. ಇದರಿಂದ ಅವಳನ್ನು ಹೊರಗೆಳೆವಬಗೆ ಹಳಹಳಿಕೆಯಾಗಿ ಅವರಲ್ಲಿ ಮೂಡುವ ಪರಿಯೂ ವಿಶಿಷ್ಟ.

ಕೊಡಲೇ ಇಲ್ಲವಲ್ಲ – ನಾನವಳ ಕೈಗೆ
ಒಮ್ಮೆಯಾದರು ಅವಳ ಕನಸುಗಳ?
ಆದರೂ ಕನವರಿಸಲಿಲ್ಲ ಆಕೆ ಒಮ್ಮೆಯೂ
ನನ್ನ ಮೀರಿದ ತನ್ನ ಒಳ ಜಗದ ಸ್ವಗತಗಳ – ಎಂದೂ?

– ( ಪ್ರೇಮಗೀತ)

ಮಹಿಳೆಯನ್ನು ಕುಟುಂಬದ ಒಳಗಿನಂತೆ ಹೊರಗೂ ಭಯಂಕರವಾಗಿ ಶೋಷಿಸಲಾಗಿದೆ. ಬಂಜೆ, ವಿಧವೆ ಮತ್ತು ವೇಶ್ಯೆಯ ಬಾಳಿನ ಬೆಲೆಗಳಂತೂ ಬಾಳೆಲೆಯ ಹಾಸುಂಡು ಬೀಸಿ ಒಗೆದ ವಾಸ್ತವ ಇಂದಿಗೂ, ಇಂಥ ಅವಸ್ಥೆಯನ್ನೇ ಎದುರು ನೋಡುತ್ತ ಕುಳಿತುಕೊಳ್ಳುವ ಸಮಾಜದ ಕಾಮುಕ (ಇಣುಕು) ಕಣ್ಣುಗಳು ಬದುಕಿನುದ್ದಕ್ಕೂ ಅವಳ ಮೈ ಮನಗಳನ್ನು ಬೇಟೆಯಾಡುತ್ತಲೇ ಹೋಗುವ ಪರಿ, ಸಂದರ್ಭ – ಸನ್ನಿವೇಶಗಳ ಸಂಧಿಯಲ್ಲಿ ಸಿಲುಕಿ ಅವಳು ನಲುಗುವ ಪರಿ, ಘಾಸಿಗೊಂಡು ಕಾಯ್ದ ಮೈ-ಮನಗಳಲ್ಲಿ ಸ್ಫೋಟಗೊಂಡರೂ ಅವಳ ಉಸಿರು ಧ್ವನಿಯಾಗದೇ ಉನ್ಮತ್ತ ಕೆಂಪುದೀಪದಡಿಯೋ, ದೌರ್ಜನ್ಯದ ಕರಾಳ ಕತ್ತಲೊಳಗೋ

ಕರಗುತ್ತ ನಿಶ್ಯಬ್ದ ಸ್ತಬ್ಧವಾಗುತ್ತ ಹೋಗುವ ಪರಿಯನ್ನು ಮೊಗಸಾಲೆಯವರ ಕಾವ್ಯ ಸ್ಫುಟವಾಗಿ ತೆರೆದಿಡುತ್ತದೆ.

"ಗುಜ್ಜಾನೆ ಮರಿಯ ಹಾಗೆ ಅವಳಿದ್ದಳು!
ಹೇಳುತ್ತಿದ್ದರು ಎಲ್ಲ
ಒಳಗೊಳಗೇ ನಗುತ್ತ ಅವಳನ್ನು ಹಂಚಿಕೊಂಡವರು
............................
ಬಿದ್ದವಳು ಅವಳು ಬೀದಿಯಾಗಿ ಬೀದಿಗೆ........
...........................
ಸತ್ತಳು ಅವಳು ಮೊನ್ನೆ ಅನಿರೀಕ್ಷಿತವಾಗಿ ಇದ್ದಕಿದ್ದ ಹಾಗೆ
ಹಾ! ಎನ್ನಲು ಇರಲಿಲ್ಲ ಒಂದೂ ಕೊರಳು ಅವಳಿಗೆ......"

– ( ಗುಜ್ಜಾನೆ ಮರಿಯ ಹಾಗೆ ಅವಳಿದ್ದಳು!)

"ಇತ್ತು ಆಸೆ ಅವಳಿಗೆ;
ದೊಡ್ಡ ಪಟ್ಟಣವಾಗಬೇಕು ತಾನೆಂದು
ಆಗಲಿಲ್ಲ
ಯಾವುದೋ ಒಂದು ಪಟ್ಟಣದಲ್ಲಿ
ಹೆಜ್ಜೆಯಾದಳು ಯಾರದೋ!"

– (ಇತ್ತು ಆಸೆ ಅವಳಿಗೆ)

ಎಂದು ಹೇಳುತ್ತ ಮುಂಬೈಯಂಥ ನಗರದಲ್ಲಿ ನಿತ್ಯವೂ ಮಹಿಳೆಯ ಮೇಲಾಗುವ ಅನ್ಯಾಯ ಅತ್ಯಾಚಾರಗಳನ್ನು, ಅವಳ ಬಿಸಿಯುಸಿರಿನುದ್ದಕ್ಕೂ ಹರಿವ ಹಾಹಾಕಾರ ತಲ್ಲಣ ತಳಮಳಗಳನ್ನು, ಬಿಕ್ಕುವ ಬಿಕ್ಕಳಿಕೆಗಳನ್ನು ಮೊಗಸಾಲೆಯವರು ವಿಷಾದದ ದನಿಯಲ್ಲಿ ದಾಖಲಿಸುತ್ತಾರೆ –

"........... ಸಂಜೆಯಾಗುವ ಮೊದಲೇ
ಮುಂಬೈಯಲ್ಲಿ ಸಂಜೆ!
................................
ಮಾತಿಗಾಗಿ ತಹತಹಿಸುವ
ಮಾತಿಲ್ಲದ ಮುಂಬೈಯ ಎಷ್ಟೋ ಮನೆಗಳು
ಪ್ರೇಮಿಸುತ್ತಿದ್ದರೂ ಪ್ರೇಮ ಸಲ್ಲಾಪಕ್ಕೆ ಇಲ್ಲದ ಕ್ಷಣಗಳು
ಇಲ್ಲಿ ದಿಢೀರನೆ ಮನೆಗಳಾಗುತ್ತವೆ, ಮುತ್ತಾಗುತ್ತವೆ
ಮರುಕ್ಷಣ ಮುಕ್ಕಾಗಿ ಮರಳಾಗುತ್ತವೆ ಪಾಪ!

ಈ ನಡುವೆ ನೀರಲ್ಲಿ ಮುಳುಗಿ ಏಳುತ್ತಾ ನಿಂತ
ನಿರ್ಲಿಪ್ತ ಕಪ್ಪು ಬಂಡೆಗಳ ಮೇಲೆ
ಕಾಮಾಟಿಪುರದ ಬಿಕ್ಕಳಿಕೆಯ
ಇಲ್ಲವೇ ಸೊಕ್ಕಿದ ಕ್ರೌರ್ಯದ
ಹಾವಸೆಗಳು ಮೈಚಾಚುತ್ತವೆ!"

– (ಮುಂಬೈಗೆ – ಬ್ಯಾಂಡ್ ಸ್ಟ್ಯಾಂಡ್ ಬೀಚು)

ಹೀಗೆ ಮಾನವೀಯ ತುಡಿತವಾಗಿ ಮಿಡಿದ ಕವಿ ಮನವು –

"ಈಕೆ ಇರುವಷ್ಟು ಕಾಲ
ಇದ್ದದ್ದೇ ಗೊತ್ತಾಗಲಿಲ್ಲ ನನಗೆ" – ( ನನ್ನ ಕಾಂಬಿ ಪುಟ್ಟತ್ತೆ)

"ಒಮ್ಮೆಯೂ ನನ್ನ ಕನಸಿಗೆ
ಬಾರದೇ ಹೋದಳು!" – ( ಇತ್ತು ಆಸೆ ಅವಳಿಗೆ)

ಎಂಬ ಪಶ್ಚಾತ್ತಾಪದ ಬೇಗುದಿಗೆ ಇಡೀ ಪುರುಷಶಾಹಿ ಪ್ರಜ್ಞೆಯನ್ನು ಅಂತಿಮವಾಗಿ ತಳ್ಳಿಬಿಡುತ್ತದೆ.

ಸ್ತ್ರೀಪರ ಚಿಂತನೆಗೆ ಹಿನ್ನೆಲೆಯಾಗಿ ಅಹಲ್ಯ, ದ್ರೌಪದಿ, ಸೀತೆ, ಶಬರಿ, ಆಮ್ರಪಾಲಿ ಮುಂತಾದ ಪಾತ್ರಗಳ ಒಳ–ಹೊರಗುಗಳನ್ನು ಬಿಚ್ಚಿ ಪುರುಷ ದೌರ್ಜನ್ಯದ ಕುರುಹುಗಳನ್ನು ಪಟ್ಟಿ ಮಾಡುವ ಮೊಗಸಾಲೆಯವರು ಬದುಕಿನಲ್ಲಿ ಹೆಣ್ಣಿಗೆ ಸಮಾನ ಸ್ಥಾನ ಮಾನಗಳನ್ನು ನೀಡಬೇಕೆಂಬ ಪ್ರಾಮಾಣಿಕ ಆಶಯವುಳ್ಳವರು. ಅದಕ್ಕಾಗಿ ಅವರು ತಮ್ಮ ಕಾವ್ಯವನ್ನು –

"ಕವಿತೆಯೇ ಹೋಗು
ಮನುಷ್ಯನ ಮಾತಾಗು...." – ( ನನ್ನ ಕವಿತೆಗಳು)

ಎಂದು ಪ್ರಜ್ಞಾವಂತ ಪಾತಳಿಯ ಮೇಲೆ ದುಡಿಸಿಕೊಳ್ಳುತ್ತಾರೆ.

"ನನಗೆ ನಾನಿರುವುದರಿಂದ
ನನ್ನ ಹಾಗೇ ಇರುವವಳೊಬ್ಬಳು ಬೇಕು...."

– ( ನನಗೆ ನಾನಿರುವುದರಿಂದ)

ಎಂದು ಹಾತೊರೆಯುತ್ತಾರೆ.

ಸ್ತ್ರೀ ಸಹಜವಾದ ಪ್ರೀತಿ ಮದುವೆ ವಾತ್ಸಲ್ಯಗಳಿಗೆ ಇನ್ನೊಂದು ಮಗ್ಗುಲವಾಗಿ ತೆರೆದ ದೃಷ್ಟಿ ಮೊಗಸಾಲೆಯವರ ಕಾವ್ಯದಲ್ಲಿದೆ. ಇಲ್ಲಿ ಬರುವ ತಾಯಿ, ತಾಯಿ

ಅಂದರೆ.... ನನಗಾಕೆ ದೇವರಲ್ಲ; ತಾಯಿ, ನನ್ನ ಕಾಂಬಿ ಪುಟ್ಟತ್ತೆ, ಹರಿದ್ವರ್ಣದ ಈ ಹುಡುಗಿ, ಕರಾವಳಿಯ ಬೇಸಗೆಯ ಹೊಳೆ, ಶಾಪ ಮುಕ್ತ ಅಹಲ್ಯೆಯ ರಾತ್ರೆ, ವ್ಯಕ್ತಮಧ್ಯ ಮುಂತಾದ ಕವಿತೆಗಳಲ್ಲಿ ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಗೆ ಬದ್ಧಳಾಗಿ ಬದುಕಿದ ರೀತಿ ಇದ್ದರೂ, ಅವಳ ನಿಷ್ಕಲ್ಮಶ ಹೃದಯದ ಅಂತಃಕರಣ, ಪ್ರೀತಿ, ಮಮತೆ, ಸಿಟ್ಟು, ಸೆಡವುಗಳಲ್ಲಿ ಮನುಷ್ಯ ಬದುಕು ಸದಾ ಹಸಿರಾಗಿ ಅರಳಿ ನಿಂತಿರುವುದನ್ನು ಕಾಣಬಹುದು.

ಒಟ್ಟಿನಲ್ಲಿ ಮನುಷ್ಯ ಕೇಂದ್ರಿತ ನಿಲುವುಗಳನ್ನಿಟ್ಟುಕೊಂಡು ನಡೆವ ನವ್ಯರು ಎಡವಿ –

“ಅಡಗಿದ್ದರು ಬಾಟಲಿ ಬಾಯೊಳಗೆ
ಹೆಣ್ಣಿನ ನಡಕೆಳಗೆ.......”

– ( ಸಿದ್ದಲಿಂಗ ದೇಸಾಯಿ)

ಎನ್ನುವಂತೆ ಹೆಣ್ಣನ್ನು ಭೋಗದ ವಸ್ತುವಾಗೇ ನೋಡುವ ಪರಂಪರೆಯ ನೀತಿಯನ್ನು ಉಳಿಸಿಕೊಂಡು ಬಂದ ಸಂದರ್ಭದಲ್ಲಿ ಮೊಗಸಾಲೆಯವರು “ಅವರೊಡನಿದ್ದೂ ಅವರಂತಾಗದೆ ಜಗ್ಗಿದ ಕಡೆ ಬಾಗದೆ” ಅದೇ ಮಾರ್ಗದಲ್ಲಿ ಭಿನ್ನವಾಗಿ ನಿಂತು ಸ್ತ್ರೀಪರ ಕಾಳಜಿಯನ್ನು ತೂಕ ತಪ್ಪದ ನಿಲುವಿನಲ್ಲಿ ನಿರ್ವಹಿಸುತ್ತಾರೆ.

ಕೊನೆಯ ಮಾತು, ಮಹಿಳೆ ತಾನು ಅನುಭವಿಸಿ ಬಂದ ಬದುಕಿನೊಳಗೆ ಹೊಸ ನೋಟ, ಗ್ರಹಿಕೆ, ಹೊಸ ದಾರಿ ಮತ್ತು ಸಾಧ್ಯತೆಗಳನ್ನು ಕಂಡುಕೊಂಡು ಜಾಗೃತಳಾಗಿ ಈ ಸ್ವದೇಶಿ ಶೋಷಣೆಯ ತೆಕ್ಕೆಯಿಂದ ಬಿಡಿಸಿಕೊಳ್ಳಲು ಹವಣಿಸುತ್ತಿರುವ ಸಂದರ್ಭದಲ್ಲೇ, ಇಂದು ‘ವಿದೇಶಿ ಮುಕ್ತ ಮಾರುಕಟ್ಟೆ’ಯೆಂಬ ಇನ್ನೊಂದು ರೀತಿಯ ಭಯಾನಕ ಸಂಸ್ಕೃತಿಯ ಬಲಿಷ್ಟ ತೋಳುಗಳು ಅವಳನ್ನು ಹಿಡಿದು ಇನ್ನೂ ಭಯಂಕರವಾಗಿ ಶೋಷಿಸಲು ತೊಡಗಿವೆ. ಇಂಥ ಸಂದರ್ಭದಲ್ಲಿ ಮೊಗಸಾಲೆಯವರ ಕಾವ್ಯ ದೇಶೀಯವಾದರೂ ಈ ಚಿಂತನೆಗೆ ತುಂಬ ಆಪ್ತವಾಗಿ ಸಾಕಷ್ಟು ಬಲವನ್ನು ತುಂಬುತ್ತದೆ.

■■